ದಿಃ07.11.2023 OS No.153/2017 PW-1

ದಿಃ07.11.2023 ರಂದು ಸಾಕ್ಷಿಯನ್ನು ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ.ಹೆಚ್.ಎಸ್.ಹೆಚ್. ವಕೀಲರಿಂದ

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ತಾಲ್ಲೂಕು ಕಚೇರಿಯಿಂದ ದಾಖಲೆಗಳನ್ನು ಪಡೆದುಕೊಂಡು ಹಾಜರುಪಡಿಸಿರುತ್ತೇನೆ. ನನ್ನ ತಾತನ ಹೆಸರು ಹೊಂಬೇಗೌಡ ಅಲಿಯಾಸ್ ಕರೀಗೌಡ ಆಗಿರುತ್ತದೆ. ನನ್ನ ತಾತನಿಗೆ ಇಬ್ಬರು ಮಕ್ಕಳು. ನನ್ನ ತಂದೆಯ ಹೆಸರು ಲಿಂಗೇಗೌಡ ಅಲಿಯಾಸ್ ಪೀಚೇಗೌಡ ಆಗಿರುತ್ತದೆ. 1959 ರಲ್ಲಿ ನನ್ನ ತಾತನು ಕ್ರಯಕ್ಕೆ ಪಡೆದಿರುತ್ತಾರೆ. ಸರ್ಕಾರದಿಂದ ನನ್ನ ತಾತನಿಗೆ ಬರೆದುಕೊಟ್ಟಿರುತ್ತಾರೆ. ಈ ಸಂಬಂಧವಾಗಿ ನಾನು ಕ್ರಯ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ಮಂಜೂರು ಪತ್ರವನ್ನು ಹಾಜರುಪಡಿಸಿರುತ್ತೇನೆ. ನನ್ನ ತಾತನಿಗೆ ಹರಾಜು ಮೂಲಕ ದಾವಾ ಸ್ವತ್ತು ಬಂದಿರುತ್ತದೆ ಎಂದು ನನ್ನ ದಾವೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾತನು 41 ರೂಪಾಯಿ ಪಾವತಿ ಮಾಡಿರುವ ಬಗ್ಗೆ ದಾಖಲೆಯಲ್ಲಿ ನಮೂದಿರುತ್ತದೆ.

ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಆದೇಶ ಆಗಿರುತ್ತದೆ ಎಂದು ನನ್ನ ವಾದ ಪತ್ರದಲ್ಲಿ ಹೇಳಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅದೇ ರೀತಿ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಲಾಗಿತ್ತು ಎಂದರೆ ಆ ಬಗ್ಗೆ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ನನ್ನ ತಾತನು 1956 ರಲ್ಲಿ ಮೃತರಾಗಿರುತ್ತಾರೆ. ಈ ಬಗ್ಗೆ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಓ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ.